ಮೂರನೇ ಹಿಂದುಳಿದ ವರ್ಗದ ಆಯೋಗ

೧೫೭೭. ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ). —ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿಯವರ ನೇತೃತ್ವದ ಮೂರನೇ ಹಿಂದುಳಿದ ವರ್ಗದ ಆಯೋಗ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿದೆಯೇ ?

ಆ) ಹಾಗಿದ್ದಲ್ಲಿ, ಈ ವರದಿಯನ್ನು ಯಾವಾಗ ಪ್ರಕಟಪಡಿಸಲಾಗುವುದು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು).—

ಅ) ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿಯವರ ನೇತೃತ್ವದ ಮೂರನೇ ಹಿಂದುಳಿದ ವರ್ಗದ ಆಯೋಗವು ಸರ್ಕಾರಕ್ಕೆ ವರದಿ ಸಲ್ಲಿಸಿದೆ.

ಆ) ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ದಕ್ಷಿಣ ಕನ್ನಡ ಜಿಲ್ಲೆಗೆ ಪಕ್ಕ್ಹೆ ನೆರವು

೧೭೪. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕೈಗಾರಿಕೆ ಇಂಧನ ಮತ್ತು ಪಕ್ಹೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಸೀದಿಗಳ ದುರಸ್ತಿ ಮತ್ತು ಕಟ್ಟಡಗಳಿಗಾಗಿ ವಕ್ಫ್ ಮಂಡಳಿಯಿಂದ ೧೯೮೭–೮೮, ೧೯೮೮–೮೯ ಹಾಗೂ ೧೯೮೯–೯೦ರಲ್ಲಿ ಎಷ್ಟು ಹಣ ಒದಗಿಸಲಾಗಿದೆ, ಯಾವ ಯಾವ ಮಸೀದಿಗಳಿಗೆ ಎಷ್ಟೆಷ್ಟು ?

ಆ) ಮೇಲ್ಕಂಡ ವರ್ಷಗಳಲ್ಲಿ ದುರಸ್ತಿಗಾಗಿ ನೆರವು ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು?

ಇ) ಆ ಪೈಕಿ ಎಷ್ಟು ಅರ್ಜಿಗಳಿಗೆ ನೆರವು ಕೊಡಲಾಗಿದೆ ಮತ್ತು ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಮಂತ್ರಿಗಳು).—

ಅ) ವಕ್ಫ್ ಮಂಡಳಿಯಿಂದ ವಕ್ಫ್ ಸಂಸ್ಥೆಗಳಿಗೆ ಒದಗಿಸಲಾದ ಹಣದ ವಿವರ ಹೀಗಿದೆ.

ಅ) ೧೯೮೭–೮೮ — ರೂ. ೨,೦೦,೦೦೦–೦೦
ಆ) ೧೯೮೮–೮೯ — ರೂ. ೧,೨೨,೦೦೦–೦೦
ಇ) ೧೯೮೯–೯೦ — ರೂ. ೯೦,೦೦೦–೦೦

(ಹಣ ಮಂಜೂರಾಗಿರುವ ಮಸೀದಿಗಳ ತಃಖ್ತೆಯನ್ನು ಇದರೊಂದಿಗೆ ಲಗತ್ತಿಸಿದೆ).

(ಆ) ಅ) ೧೯೮೭–೮೮ — ೪೫ ಅರ್ಜಿಗಳು
ಆ) ೧೯೮೮–೮೯ — ೩೪ ಅರ್ಜಿಗಳು
ಇ) ೧೯೮೯–೯೦ — ೬ ಅರ್ಜಿಗಳು

(ಇ)

ವರ್ಷ	ನೆರವು ನೀಡಲಾದ ಅರ್ಜಿಗಳ ಸಂಖ್ಯೆ	
ಅ) ೧೯೮೭–೮೮	೨೩	೨೨
ಆ) ೧೯೮೮–೮೯	೧೩	೨೧
ಇ) ೧೯೮೯–೯೦	೪	೨